**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.137/2020**

**(ಚಾ.ಸಾ.3/ಪ್ರಾ.ಸಾ.1)**

ತಾಃ26-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಪುಷ್ಪ ಪ್ರಸನ್ನಕುಮಾರ್ |
| ಗಂಡನ ಹೆಸರು | ಪ್ರಸನ್ನಕುಮಾರ್ |
| ವಯಸ್ಸು | 34 ವರ್ಷ |
| ಉದ್ಯೋಗ | ಸೂಪರ್ ವೈಸರ್ |
| ವಾಸ ಸ್ಥಳ | ನಂದಿನಿ ಲೇಔಟ್, ಬೆಂಗಳೂರು. |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

1. ಮೃತ ಪ್ರಸನ್ನಕುಮಾರ್ ನನ್ನ ಯಜಮಾನರಾಗಿದ್ದು, ನಮ್ಮಿಬ್ಬರ ವಿವಾಹ ಸಮಾರು 17 ವರ್ಷದ ಹಿಂದೆ ಆಗಿದ್ದು, ವೈವಾಹಿಕ ಜೀವನದಿಂದ ನನಗೆ ಇಬ್ಬರು ಗಂಡು ಮಕ್ಕಳು ಜನಿಸಿರುತ್ತಾರೆ. ನನ್ನ ಗಂಡ ಕಾರ್ಪೆಂಟರ್ ಆಗಿ ಕೆಲಸ ಮಾಡುತ್ತಿದ್ದರು. ನನ್ನ ಅತ್ತೆಯ ಮನೆ ಚೌಡೇಶ್ವರಿ ನಗರ, ಲಗ್ಗೆರೆಯಲ್ಲಿರುತ್ತದೆ. ಪ್ರತೀ ಶನಿವಾರ ಮತ್ತು ಭಾನುವಾರದಂದು ನಾನು ಮತ್ತು ನನ್ನ ಯಜಮಾನರು ಅತ್ತೆಯ ಮನೆಗೆ ಭೇಟಿ ನೀಡುತ್ತಿದ್ದೆವು. ನಾನು ಹಾಗೂ ನನ್ನ ಗಂಡ ನಂದಿನಿ ಲೇಔಟ್ ನಲ್ಲಿ ವಾಸ ಇದ್ದೆವು. ದಿನಾಂಕ 14-02-2020 ರಂದು ನಮ್ಮ ಅತ್ತೆಯ ವಟಾರದ ಮನೆ ಬಳಿ ಚಾಸಾ.1 ರವರ ಮನೆಯಲ್ಲಿ

ಚಾಸಾ.1, ನನ್ನ ಗಂಡ, ಗಣೇಶ್, ಅವಿನಾಶ್ ಹಾಗೂ ಚಂದ್ರಶೇಖರ್ ಎನ್ನುವವರು ಮದ್ಯಪಾನ ಮಾಡುತ್ತಿದ್ದರು. ನಾನು ಹೇಳಿದ ಚಂದ್ರಶೇಖರ್(ಚಾಸಾ.2) ಇವರು ಗೋವಿಂದರಾಜು ಇವರ ಮಗ ಆಗಿದ್ದು, ಅವರು ಈಗ ಜೀವಂತ ಇಲ್ಲ. ಆರೋಪಿ ಅವಿನಾಶ್ ಇವರ ಮೊಬೈಲ್ ಅನ್ನು ಮದ್ಯಪಾನ ಮಾಡುತ್ತಿದ್ದವರ ಪೈಕಿ ಯಾರೋ ತೆಗೆದುಕೊಂಡಿರುತ್ತಾರೆಂದು ಹೇಳಿ ಅವಿನಾಶ್ ಇವರು ಉಳಿದವರ ಜೊತೆ ಜಗಳ ಆಡಿರುತ್ತಾರೆ.

2. ನಾನು ದಿನಾಂಕ 15-02-2020 ರಂದು ಸಂಜೆ 08:30 ರ ಸಮಯಕ್ಕೆ ಹೋಗಿದ್ದು, ಆ ಸಮಯದಲ್ಲಿ ನನ್ನ ಗಂಡ ಅತ್ತೆಯ ಮನೆಯಲ್ಲಿದ್ದು, ಆ ದಿನ ನಮ್ಮ ಅತ್ತೆಯ ಮನೆಯಲ್ಲಿ ಉಳಿದಿದ್ದು, ಮಾರನೆಯ ದಿನ ಬೆಳಗ್ಗೆ ನಾನು 05:30 ಕ್ಕೆ ನಂದಿನಿ ಲೇಔಟ್ ನಲ್ಲಿರುವ ನಮ್ಮ ಮನೆಗೆ ಹೋಗಿ ಅಲ್ಲಿಂದ ನಾನು ಕೆಲಸಕ್ಕೆ ಹೋಗಿದ್ದು ನನ್ನ ಗಂಡ ಅತ್ತೆಯ ಮನೆಯಲ್ಲಿ ಉಳಿದುಕೊಂಡಿದ್ದರು. ಮಾರನೆಯ ದಿನ ನಾನು ಕೆಲಸಕ್ಕೆ ಹೋಗಿದ್ದ ಸಮಯದಲ್ಲಿ ನನ್ನ ನಾದಿನಿಯಾದ ಚಾಸಾ.8 ಪುಷ್ಪ ಇವರು ನನಗೆ ಫೋನ್ ಮಾಡಿ ನನ್ನ ಗಂಡನನ್ನು ಪೋಲೀಸರು ಮೊಬೈಲ್ ವಿಚಾರವಾಗಿ ಕರೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ. ಚಾಸಾ.8 ರವರು ತಿಳಿಸಿದಂತೆ ನನ್ನ ಯಜಮಾನರನ್ನು ರಾಜಗೋಪಾಲನಗರ ಪೋಲೀಸರು ಕರೆದುಕೊಂಡು ಹೋಗಿದ್ದು ಅವರು ಒಂದು ಫೋನ್ ನಂಬರ್ ಅನ್ನು ನೀಡಿದ್ದು, ಅದಕ್ಕಾಗಿ ನನ್ನ ತಾಯಿ ರೀಟಾ ವಿಜಯ್ ಇವರಿಗೆ ಫೋನ್ ಮಾಡಿ ಚಾಸಾ.8 ರವರ ಜೊತೆ ರಾಜಗೋಪಾಲನಗರ ಪೋಲೀಸ್ ಠಾಣೆಗೆ ಹೋಗಿ ವಿಚಾರಿಸಲು ಹೇಳಿರುತ್ತೇನೆ. ಅದರಂತೆ ನನ್ನ ತಾಯಿ ಹಾಗೂ ಚಾಸಾ.8 ರವರು ರಾಜಗೋಪಾಲನಗರ ಪೋಲೀಸ್ ಠಾಣೆಗೆ ಹೋಗಿ ಚಾಸಾ.8 ರವರಿಗೆ ತಿಳಿಸಿದ ಮೊಬೈಲ್ ನಂಬರ್ ಬಗ್ಗೆ

ವಿಚಾರಿಸಿದಾಗ ಪೋಲೀಸರು ಆ ಮೊಬೈಲ್ ಪೋಲೀಸರಿಗೆ ಸೇರಿಲ್ಲ, ನನ್ನ ಗಂಡನನ್ನು ಪೋಲೀಸರು ಕರೆದುಕೊಂಡು ಬಂದಿಲ್ಲ ಎಂದು ತಿಳಿಸಿದ ಕಾರಣ ಅವರಿಬ್ಬರು ವಾಪಸ್ ಬಂದಿರುತ್ತಾರೆ.

3. ಯಾರೋ ಒಬ್ಬ ವ್ಯಕ್ತಿ ತಾನು ಪೋಲೀಸ್ ಎಂದು ಚಾಸಾ.8 ರವರಿಗೆ ಮೊಬೈಲ್ ಮೂಲಕ ಫೋನ್ ಮಾಡಿ ಮೊಬೈಲ್ ವಿಚಾರಿವಾಗಿ 5,000/- ರೂ ಹಣ ಕೊಡುವಂತೆ ಹೇಳಿದ್ದು, ಆ ವ್ಯಕ್ತಿಯ ಮೊಬೈಲ್ ನಂಬರ್ ಅನ್ನು ಪೋಲೀಸರಿಗೆ ಹೇಳಿದ್ದು, ಸದರಿ ಮೊಬೈಲ್ ನಂಬರ್ ಈಗ ನನಗೆ ನೆನಪಿಲ್ಲ. ಅದಾದ ನಂತರ ಅದೇ ದಿನ ಬೆಳಗ್ಗೆ 11:00 ರಿಂದ 11:30 ರ ಸಮಯದಲ್ಲಿ ನನ್ನ ತಮ್ಮನಾದ ಚಾಸಾ.5 ಮನು ನನಗೆ ಫೋನ್ ಮಾಡಿ ಯಾರೋ ಒಬ್ಬ ವ್ಯಕ್ತಿ ಚಾಸಾ.5 ರವರಿಗೆ ಫೋನ್ ಮಾಡಿ ನಿಮ್ಮ ಭಾವನನ್ನು ಕರೆದುಕೊಂಡು ಹೋಗಿ ಅಂಜನಾನಗರದಲ್ಲಿಟ್ಟಿದ್ದು, ಆತನನ್ನು ಬಿಡಲು 5,000/- ರೂ ಹಣ ಕೊಡುವಂತೆ ತಿಳಿಸಿದ್ದು, ತಾನು ಅಲ್ಲಿಗೆ ಹೋಗುತ್ತಿರುವುದಾಗಿ ನನಗೆ ಹೇಳಿರುತ್ತಾರೆ. ಆ ವ್ಯಕ್ತಿ ಚಾಸಾ.5 ರವರ ಬಳಿ ನನ್ನ ಗಂಡ, ಚಾಸಾ.1 ರಾಜೇಶ್ ಹಾಗೂ ಚಾಸಾ.2 ಚಂದ್ರಶೇಖರ್ ತಲಾ 5,000/- ರೂ ಹಣ ಕೊಟ್ಟಲ್ಲಿ ನನ್ನ ಗಂಡನನ್ನು ಬಿಡುವುದಾಗಿ ತಿಳಿಸಿರುತ್ತಾರೆ. ಚಾಸಾ.5 ರವರು ಆಟೋ ಚಾಲಕನಾಗಿದ್ದು, ಸದರಿ ಸ್ಥಳಕ್ಕೆ ಆಟೋದಲ್ಲಿ ಹೋಗಿರುತ್ತಾರೆ.

4. ಚಾಸಾ.5 ರವರು ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಗಂಡ, ಚಾಸಾ.1 ಮತ್ತು 2 ರವರಿಗೆ ಆ ವ್ಯಕ್ತಿಗಳು ಹೊಡೆದಿದ್ದು, ನನ್ನ ಗಂಡ ತುಂಬಾ ಸುಸ್ತಾಗಿದ್ದರು ಎಂದು ನನಗೆ ತಿಳಿಸಿರುತ್ತಾರೆ. ಆ ವ್ಯಕ್ತಿಗಳು ಒಂದುಪಕ್ಷ ಹಣ ನೀಡದಿದ್ದಲ್ಲಿ ಹಾಗೂ ವಿಚಾರವನ್ನು

ಪೋಲೀಸರಿಗೆ ತಿಳಿಸಿದ್ದಲ್ಲಿ ಕಲ್ಲು ಎತ್ತಿಹಾಕಿ ನಿನ್ನ ಭಾವನನ್ನು ಕೊಂದುಹಾಕುವುದಾಗಿ ಚಾಸಾ.5 ರವರಿಗೆ ತಿಳಿಸಿರುತ್ತಾರೆ. ನಂತರ ಚಾಸಾ.5 ರವರು 2,500/- ರೂ ಹಣ ಹೊಂದಿಸಿ ಚಾಸಾ.7 ಕೆಂಪ ಇವರ ಮೂಲಕ ಆ ವ್ಯಕ್ತಿಗಳಿಗೆ ಕೊಡಿಸಿರುತ್ತಾರೆ. ಚಾಸಾ.5 ರವರು ಆ ವ್ಯಕ್ತಿಗಳಿಗೆ ಫೋನ್ ಮಾಡಿ ತನ್ನ ಭಾವ ಇನ್ನೂ ಬಂದಿಲ್ಲ ಎಂದು ವಿಚಾರಿಸಿದಾಗ ನನ್ನ ಗಂಡನನ್ನು ಬಿಟ್ಟು ಕಳುಹಿಸಿರುವುದಾಗಿ ಆ ವ್ಯಕ್ತಿಗಳು ಚಾಸಾ.5 ರವರಿಗೆ ತಿಳಿಸಿರುತ್ತಾರೆ. ನಮ್ಮ ಯಜಮಾನರು ಮನೆಗೆ ಬರಬಹುದು ಎಂಬ ಉದ್ದೇಶದಿಂದ ನಾನು ನನ್ನ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ ಬರುತ್ತಿದ್ದು, ನನ್ನ ಅತ್ತೆ ಅವರ ಮಗನಿಗೆ ಕಾಯುತ್ತಿದ್ದರು. ನಾನು ನನ್ನ ಅತ್ತೆಗೆ ಹಾಗೂ ನನ್ನ ಅಮ್ಮನಿಗೆ ಫೋನ್ ಮಾಡಿ ವಿಚಾರಿಸಿದ್ದು, ನನ್ನ ಗಂಡ ಬಂದಿಲ್ಲ ಎಂದು ಅವರು ತಿಳಿಸಿದ ಕಾರಣ ನಾನು ಚಾಸಾ.5 ರವರನ್ನು ಕರೆದುಕೊಂಡು ಅಂಜನಾನಗರಕ್ಕೆ ರಾತ್ರಿ 09:00 ಗಂಟೆಗೆ ಹೋಗಿ ಹುಡುಕಿ ನನ್ನ ಗಂಡ ಸಿಗದಿದ್ದ ಕಾರಣ ವಾಪಸ್ ಮನೆಗೆ ಬಂದಿರುತ್ತೇವೆ.

5. ಮಾರನೆ ದಿನ ಅಂದರೆ 18-02-2020 ರಂದು ಅಂಜನಾನಗರಕ್ಕೆ ನನ್ನ ತಮ್ಮನನ್ನು ಕರೆಸಿದ ಸ್ಥಳಕ್ಕೆ ನಾನು, ನನ್ನ ಅಮ್ಮ, ಅತ್ತೆ, ಚಾಸಾ.5 ಮನು ಹಾಗೂ ಗಣೇಶ್ ಇವರೊಂದಿಗೆ ಬೆಳಗ್ಗೆ 09:00 ಅಥವಾ 09:30 ಗಂಟೆಗೆ ಭೇಟಿ ನೀಡಿ ನನ್ನ ಗಂಡನನ್ನು ಹುಡುಕಿದ್ದು, ಸಿಕ್ಕಿರುವುದಿಲ್ಲ. ಅದೇ ದಿನ ಬೆಳಗ್ಗೆ 10:30 ಅಥವಾ 11:00 ಗಂಟೆ ಸಮಯದಲ್ಲಿ ನನ್ನ ಗಂಡನನ್ನು ಹುಡುಕುತ್ತಾ ಅಂಜನಾನಗರದಲ್ಲಿರುವ ಮುತ್ತಿನಪಾಳ್ಯ ರಸ್ತೆ ನಿರ್ಮಾಣ ಆಗುತ್ತಿದ್ದ ಸ್ಥಳದ ಪಕ್ಕದಲ್ಲಿ ಇದ್ದ ತೋಪಿನಲ್ಲಿ ಹುಡುಕುವಾಗ ನನ್ನ ಗಂಡನ ಮೃತ ದೇಹ ಪತ್ತೆ ಆಗಿರುತ್ತದೆ. ನನ್ನ ಗಂಡನ ಶವ ಮಕಾಡೆ ಬಿದ್ದಿದ್ದು, ಸಾಕಷ್ಟು ಪೆಟ್ಟಾಗಿದ್ದು, ಕೈ-ಕಾಲು ಹಾಗೂ ಪೂರ್ತಿ ದೇಹ ಹಸಿರು ಬಣ್ಣಕ್ಕೆ ತಿರುಗಿತ್ತು. ನಾನು ಪ್ರಕರಣಕ್ಕೆ

ಸಂಭಂದಿಸಿದಂತೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

6. ಸಾಕ್ಷಿದಾರರು ತನ್ನ ಗಂಡನ ಮೃತ ದೇಹ, ಅದು ಬಿದ್ದ ಸ್ಥಳದ ಫೋಟೋಗಳನ್ನು ನೋಡಿ ಗುರುತಿಸಿದ್ದು, ಸದರಿ ಫೋಟೋಗಳು 14 ಸಂಖ್ಯೆಯಲ್ಲಿದ್ದು, ಅವುಗಳನ್ನು ಒಟ್ಟಾಗಿ ನಿಪಿ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ**

1. ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಆರೋಪಿತರು ತಮ್ಮ ಪರ ವಕೀಲರು ಊರಿಗೆ ಹೋಗಿದ್ದು, ಪಾಟೀ ಸವಾಲು ಮಾಡಲು ಸಮಯ ಕೋರಿರುತ್ತಾರೆ. ಪಾಟೀ ಸವಾಲಿಗೆ ಸಮಯ ನೀಡಲು ಯಾವುದೇ ಸಕಾರಣ ಇಲ್ಲವಾಗಿ ಆರೋಪಿತರ ಮನವಿಯನ್ನು ತಿರಸ್ಕರಿಸಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.